# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. 262/2014

ಚಾಸಾ-24 ಪ್ರಾಸಾ-14

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 12-02-2026

| | | |
|---|---|---|
| ಹೆಸರು | : | ಈರಣ್ಣ |
| ತಂದೆಯ ಹೆಸರು | : | ಬಸಲಿಂಗಪ್ಪ |
| ವಯಸ್ಸು | : | 73 ವರ್ಷ |
| ಉದ್ಯೋಗ | : | ನಿವೃತ್ತ ಸಹಾಯಕ ನಿರ್ದೇಶಕರು<br>ಪಂಚಾಯತ ರಾಜ ಇಲಾಖೆ |
| ವಾಸಸ್ಥಳ | : | ಕಲಬುರಗಿ |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

ದಿಃ 01-04-2010 ರಿಂದ 2011 ರವರೆಗೆ ರೇವೂರು ಮತ್ತು ಬಡದಾಳ ಗ್ರಾಮ ಪಂಚಾಯತಿಯ ಅಭಿವೃದ್ದಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2010 ರಲ್ಲಿ ನೀರಿನ ಸಲುವಾಗಿ ಸರಕಾರದಿಂದ ಬಿಡುಗಡೆಯಾದ ಪ್ರತ್ಯೇಕವಾಗಿ ರೂ. 45900/- ಗಳು ಎರಡೂ ಪಂಚಾಯತಿಗಳಿಗೆ ನೀಡಿದ್ದು 1 ನೇ ಆರೋಪಿ ನಮಗೆ ಅಧಿಸೂಚನೆ ಪತ್ರದ ಮೇಲೆ ಸಹಿ ಪಡೆಯದೇ ಒಂದು ಖಾಲಿ ಬಿಳಿ ಹಾಳೆಯ ಮೇಲೆ ಸಹಿ ಪಡೆದಿರುತ್ತಾರೆ. ಸದರಿ ಹಣಕ್ಕೆ ಸಂಬಂಧಿಸಿದ ಡಿಡಿ ಗಳನ್ನು VSSN ನೇದರಲ್ಲಿ ಸಂದಾಯ ಮಾಡಿರುವುದು ಆನಂತರ ಗೊತ್ತಾಗಿರುತ್ತದೆ. ಸದರಿ ಹಣವನ್ನು 2 ಮತ್ತು 3 ನೇ ಆರೋಪಿತರು ಪಡೆದುಕೊಂಡಿರುತ್ತಾರೆ. ಸದರಿ ವಿಷಯವನ್ನು ನಮ್ಮ ಮೇಲಾಧಿಕಾರಿ ಗಮನಕ್ಕೆ ತಂದಿದ್ದು ಅವರು ಅದನ್ನು ಬಗೆಹರಿಸುತ್ತೇನೆ ಎಂದು ಆಶ್ವಾಸನೆ ನೀಡಿರುತ್ತಾರೆ. ಆನಂತರ ನನ್ನದು ಶಹಾಪುರಕ್ಕೆ ವರ್ಗಾವಣೆ ಆಗಿರುತ್ತದೆ.

<u>ಪಾಟೀ ಸವಾಲುಃ **3** ಮತ್ತು **4** ನೇ ಆರೋಪಿ ಪರ ಶ್ರೀ **KGP** ವಕೀಲರಿಂದಃ-</u>

ಈ ಪ್ರಕರಣದ ಮಾಹಿತಿ ಗೊತ್ತಾದ ನಂತರ ನಾನು ನನ್ನ ಮೇಲಾಧಿಕಾರಿಗಳಿಗೆ ತಿಳಿಸಿರುತ್ತೇನೆ. ನನಗೆ ಈ ಪ್ರಕರಣದ ಮಾಹಿತಿ ತಾಲೂಕ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ರವರಿಂದ ಗೊತ್ತಾಗಿರುತ್ತದೆ. 1 ನೇ ಆರೋಪಿ ತಾಲೂಕ ಪಂಚಾಯತಿಯಲ್ಲಿ ಲೆಕ್ಕಪತ್ರ ಅಧೀಕ್ಷಕರಾಗಿದ್ದರು. ಈ ಪ್ರಕರಣ ಮುಖ್ಯವಾಗಿ 1 ನೇ ಆರೋಪಿ ಕಾರಣವಾಗಿರುತ್ತಾನೆ ಎಂದರೆ ಸರಿ. ಪ್ರಕರಣಕ್ಕೆ ಸಂಬಂಧಿಸಿದ ಕಡತಗಳು/ದಾಖಲಾತಿಗಳು ನಾನು ನೋಡಿಲ್ಲ.

ಕಾರ್ಯನಿರ್ವಾಹಕ ಅಧಿಕಾರಿ ರವರು ನನಗೆ ಈ ಪ್ರಕರಣ ಕುರಿತು ಹೇಳುವ ಮೊದಲು ನನಗೆ ಮಾಹಿತಿ ಇರಲಿಲ್ಲ ಎಂದರೆ ಸರಿ. ಈ ಘಟನೆಯಲ್ಲಿ ಏನು ನಡೆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಮುಖ್ಯವಿಚಾರಣೆಯಲಿ ಹೇಳಿದ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ